ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 16/4/21

# ಬೇಕಾಬಿಟ್ಟಿ ಕೋವಿಡ್ ಚಿಕಿತ್ಸಾ ದರ ವಸೂಲಿಗೆ ಸರ್ಕಾರ ಬ್ರೇಕ್

## ಜೂನ್‌ನಲ್ಲಿ ನಿಗದಿ ಆಗಿದ್ದ ದರ ಮರುಜಾರಿ

• **ಕನ್ನಡ ಪ್ರಭ ವಾರ್ತೆ**, ಬೆಂಗಳೂರು

ಕೊರೋನಾ ಸೋಂಕಿತರ ಚಿಕಿತ್ಸೆಯ ಹೆಸರಲ್ಲಿ ಬೇಕಾಬಿಟ್ಟಿ ಹಣ ವಸೂಲಿ ಮಾಡುತ್ತಿದ್ದವು ಎನ್ನಲಾದ ಖಾಸಗಿ ಆಸ್ಪತ್ರೆಗಳ ದುರಾಸೆಗೆ ರಾಜ್ಯ ಸರ್ಕಾರ ಮತ್ತೆ ಬ್ರೇಕ್ ಹಾಕಿದೆ. ಸರ್ಕಾರದಿಂದ ಖಾಸಗಿ ಆಸ್ಪತ್ರೆಗೆ ಶಿಫಾರಸು ಆಗಿರುವ ರೋಗಿಗಳಿಗೆ ದಿನಕ್ಕೆ ಗರಿಷ್ಠ 10 ಸಾವಿರ ರು ಚಿಕಿತ್ಸಾ ದರ ನಿಗದಿ ಮಾಡಿ ಕಳೆದ ಜೂನ್‌ನಲ್ಲಿ ಹೊರಡಿಸಿದ್ದ ಆದೇಶವನ್ನು ಮರು ಜಾರಿಗೊಳಿಸಿದೆ. ನೇರವಾಗಿ ಖಾಸಗಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯುವರಿಗೆ ದಿನಕ್ಕೆ ಗರಿಷ್ಠ 25 ಸಾವಿರ ರು. ಚಿಕಿತ್ಸೆ ವೆಚ್ಚ ನಿಗದಿ ಪಡಿಸಲಾಗಿದೆ. ಈ ಹಿಂದಿನ ಆದೇಶಕ್ಕೂ ಹೊಸ ಆದೇಶದಕ್ಕೂ ಚಿಕಿತ್ಸಾ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

| ವಾರ್ಡ್ | ಸರ್ಕಾರದ ಶಿಫಾರಸು ಪಡೆದವರಿಗೆ | ಶಿಫಾರಸಿಲ್ಲದೆ ಖಾಸಗಿ ಆಸ್ಪತ್ರೆಗೆ ಬರುವವರಿಗೆ |
|---|---|---|
| ಜನರಲ್ ವಾರ್ಡ್ | 5,200 ರು. | 10,000ರು. |
| ಆಮ್ಲಜನಕ ಸೌಲಭ್ಯದ ವಾರ್ಡ್ | 7,000 ರು. | 12,000 ರು. |
| ಐಸಿಯು | 8,500 ರು. | 15,000 ರು. |
| ವೆಂಟಿಲೇಟರ್ ಇರುವ ಐಸಿಯು | 10,000 ರು. | 25,000 ರು. |